ಸೆಲೆಬ್ರಿಟಿ

■ ಹನಿ

## ಐಶ್ವರ್ಯ ಜೈ!

'ಐಶ್ವರ್ಯ ರೈ ಬೆಳಗಾವಿಯ ವಿಶ್ವಕನ್ನಡ ಸಮ್ಮೇಳನಕ್ಕೆ ಬರೋದಿಲ್ಲ. ಬಾಳಾ ಠಾಕ್ರೆ ಸಮ್ಮೇಳನ ವಿರೋಧಿಸಿದ್ದರಿಂದ ಹಿಂದಿ ಚಿತ್ರನಟಿಯಾಗಿರುವ ರೈ ಬರಲಿಕ್ಕಿಲ್ಲ' ಎಂದು ಕೆಲವು ಪತ್ರಿಕೆಗಳು ಸುದ್ದಿ ಹಬ್ಬಿಸಿದ್ದವು. ಕೊನೆಗೂ ಐಶ್ವರ್ಯ ಬಂದರು, ಕೈ ಬೀಸಿದರು. ಹಿಂದಿಯಲ್ಲಿ ಎರಡೇ ಎರಡು ಕನ್ನಡದ ವಾಕ್ಯಗಳನ್ನು ನುಡಿದರು, ಹೋದರು! ವಿಶ್ವಸುಂದರಿಯನ್ನು ನೋಡಲು ನೂಕುನುಗ್ಗಲು ಹೆಚ್ಚಾದಾಗ ಪೊಲೀಸರು 'ಕನ್ನಡದಲ್ಲೇ' ಲಾಠಿ ಬೀಸಿದರು.

ಮಂಗಳೂರಿನಲ್ಲಿ ಹುಟ್ಟಿದ ತೌಳವ ಸುಂದರಿ ಐಶ್ವರ್ಯಳಿಗೆ ಕನ್ನಡ ಮಾತನಾಡಲು ಬರುವುದಿಲ್ಲ ಎನ್ನುವುದು ನಿಜ. ಚಿಕ್ಕಂದಿನಲ್ಲೇ ತಂದೆ ತಾಯಿಯ ಜತೆ ಮುಂಬೈಗೆ ವಲಸೆ ಹೋದ ಐಶ್ವರ್ಯಳ ಮನೆ ಮಾತು ತುಳು. ಮದುವೆಯಾದಾಗ ಮಂಗಳೂರಿಗೆ ಬಂದಿದ್ದ ಅವರು ತುಳುವಿನಲ್ಲಿ ಮಾತನಾಡಿದ್ದರು. ಆದರೆ ಕನ್ನಡ ಬರೋದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದರು. 'ಅದ್ಯಾಕೆ ಕಲೀಲಿಲ್ಲ?' ಎಂದು ಕನ್ನಡಿಗರು ಯಾರೂ ಕೇಳಲಿಲ್ಲ; ಅವರೂ ಕಲೀಲಿಲ್ಲ. ಆದರೂ ಕನ್ನಡಿಗರ ಅಭಿಮಾನ ದೊಡ್ಡದೇ. ವಿಶ್ವ ಕನ್ನಡ ಮೇಳಕ್ಕೂ ಅವರನ್ನು ಕರೆಸಿದ್ದೇವೆ.

'ಅವರೇಕೆ ಕನ್ನಡ ಕಲೀಬೇಕು?' ಎಂದು ನೀವು ಪ್ರಶ್ನಿಸಿದರೆ ಉತ್ತರ ಸ್ಪಷ್ಟವಿದೆ. 'ಅವರಿಗೆ ಹಿಂದಿ ಬರುತ್ತೆ, ತಮಿಳು ಬರುತ್ತೆ, ಬಂಗಾಳಿ ಭಾಷೆಯನ್ನೂ ಮಾತನಾಡುತ್ತಾರೆ. ಇಂಗ್ಲಿಷಂತೂ ಬಿಡಿ; ಹೀಗಿರುವಾಗ ಕನ್ನಡವನ್ನೂ ಕಲಿಯೋದಕ್ಕೆ ಏನು ಕಷ್ಟವಾಗುತ್ತಿತ್ತು?' ಎನ್ನೋದು ಮರುಪ್ರಶ್ನೆ. ಐಶ್ವರ್ಯ 1997ರಲ್ಲಿ ಮಣಿರತ್ನಂ ನಿರ್ದೇಶನದ 'ಇರುವರ್' ತಮಿಳು ಚಿತ್ರದಲ್ಲಿ ನಟಿಸುವ ಮೂಲಕ ಪಾದಾರ್ಪಣೆ ಮಾಡಿದ್ದು ಹಳೆಯ ಕಥೆ. ಇತ್ತೀಚಿನ ರಜನಿಕಾಂತ್ ಸಿನಿಮಾ 'ಎಂಥಿರನ್'ವರೆಗೂ ಅವರ ತಮಿಳು ನಂಟು ಮುಂದುವರಿದಿದೆ.



ಆದರೆ ಕನ್ನಡದ ಸಿನಿಮಾ ನಿರ್ಮಾಪಕರ್‍ಯಾರೂ ಅವರನ್ನು ನಟಿಸಲು ಕರೆಯಲೇ ಇಲ್ಲವಂತೆ. ಬಹುಶಃ ಕನ್ನಡದ ಒಂದೆರಡು ಚಿತ್ರಗಳಲ್ಲಿ ಅವರು ನಟಿಸಿದ್ದರೆ ಕನಿಷ್ಠಪಕ್ಷ 'ಮಚ್ಚಾ.. ಕಿಚ್ಚಾ, ಫೋರ್ಕಿ, ಶಿಷ್ಯಾ..' ಮುಂತಾಗಿ ಒಂದಿಷ್ಟು ಕನ್ನಡ ಶಬ್ದಗಳಾದರೂ ಪರಿಚಯ ಆಗುತ್ತಿತ್ತೋ ಏನೊ?

ಸ್ವಾರಸ್ಯದ ವಿಷಯವೆಂದರೆ ಐಶ್ವರ್ಯ ಹುಟ್ಟಿದ್ದು ಕನ್ನಡ ರಾಜ್ಯೋತ್ಸವದಂದು. '1973, ನವೆಂಬರ್ 1' ಅವರ ಬರ್ತ್‌ಡೇ! ಮುಂಬೈಯಲ್ಲಿ ಹೈಸ್ಕೂಲ್ ಓದಿ, ಕಾಲೇಜು ಮೆಟ್ಟಿಲು ಹತ್ತಿದ ಅವರು ಕಲಿಯಲು ಹೊರಟು ಅರ್ಧಕ್ಕೆ ಬಿಟ್ಟ ವಿಷಯ ಆರ್ಕಿಟೆಕ್ಟ್! ಯಶಸ್ವಿ ಮಾಡೆಲ್ ಆದ ಬಳಿಕ 1994ರಲ್ಲಿ ಮಿಸ್ ವರ್ಲ್ಡ್ ಆದರು. ಅಲ್ಲಿಂದ ಸಿನಿಮಾ ಪಯಣ. ಈಗಾಗಲೇ 40ಕ್ಕೂ ಹೆಚ್ಚು ಸಿನಿಮಾದಲ್ಲಿ ನಟಿಸಿರುವ ಐಶ್ವರ್ಯ ಅಭಿನಯಕ್ಕಾಗಿ ಎರಡು ಫಿಲಂಫೇರ್ ಪ್ರಶಸ್ತಿಗಳನ್ನೂ ಬಾಚಿಕೊಂಡಿದ್ದಾರೆ. ಅಭಿಷೇಕ್‌ನನ್ನು ಮದುವೆಯಾಗಿ ಬಚ್ಚನ್ ಆದ ಬಳಿಕ ಅವರ ಕೀರ್ತಿಪತಾಕೆ ಇನ್ನಷ್ಟು ಏರಿದೆ. ಅವರು ಕನ್ನಡ ಕಲಿಯದಿದ್ದರೇನಂತೆ



ಕನ್ನಡಿಗರಿಗಂತೂ ಅವರು ಯಾವತ್ತೂ ಐಶ್ವರ್ಯ ಜೈ!

## ಲಕ್ಷ್ಮೀ ಕಟಾಕ್ಷ

ಫೋರ್ಬ್ಸ್ ನಿಯತಕಾಲಿಕೆ ಮತ್ತೊಮ್ಮೆ ವಿಶ್ವದ ಅತಿದೊಡ್ಡ ಶ್ರೀಮಂತರ ಪಟ್ಟಿ ಪ್ರಕಟಿಸಿದೆ. ಪಟ್ಟಿಯಲ್ಲಿ ಭಾರತೀಯರ ಸಂಖ್ಯೆ ಎಲ್ಲ ಖಂಡಗಳ ಜನರಿಗಿಂತ ಹೆಚ್ಚಿದೆ! ಜಗತ್ತಿನ ಆರನೇ ಅತಿದೊಡ್ಡ ಶ್ರೀಮಂತ ಎಂದು ಲಕ್ಷ್ಮೀ ಮಿತ್ತಲ್ ಅವರನ್ನು ಗುರುತಿಸಲಾಗಿದೆ. ಈ ಹಿಂದೆ ಸತತ ಮೂರು ವರ್ಷಗಳ ಕಾಲ ಮುಖೇಶ್ ಅಂಬಾನಿಯೇ ಭಾರತದ ಅತಿದೊಡ್ಡ ಶ್ರೀಮಂತ ಎನ್ನಲಾಗಿತ್ತು. ಈಗ ಅಂಬಾನಿಯನ್ನು ಮಿತ್ತಲ್ ಓವರ್‌ಟೇಕ್ ಮಾಡಿದ್ದಾರೆ. ಲಕ್ಷ್ಮೀ ಮಿತ್ತಲ್ ಒಟ್ಟು ಆಸ್ತಿಯ ಮೊತ್ತ 31.1 ಶತಕೋಟಿ ಡಾಲರ್ ಅಂತೆ.

ಕಳೆದ ವರ್ಷ ಮಿತ್ತಲ್ ಆಸ್ತಿ 28.7 ಶತಕೋಟಿ ಡಾಲರ್ ಇತ್ತು. ಈ ವರ್ಷ ಮತ್ತೆ ಉಕ್ಕಿಗೆ ಬೇಡಿಕೆ ಹೆಚ್ಚಿದ್ದರಿಂದ ಲಾಭ ಹೆಚ್ಚಾಗಿದೆ. 'ಜಾಗತಿಕ ಉಕ್ಕಿನ ದೊರೆ' ಎಂದೇ ಹೆಸರು ಪಡೆದಿರುವ ಲಕ್ಷ್ಮೀ ಮಿತ್ತಲ್‌ರ ಅರ್ಸೆಲರ್‌ಮಿತ್ತಲ್ ಎಂಬ ಉಕ್ಕು ಕಂಪೆನಿ 14 ದೇಶಗಳಲ್ಲಿ ಫ್ಯಾಕ್ಟರಿ ಹೊಂದಿದೆ. ಜಗತ್ತಿನಲ್ಲಿ ತಯಾರಾಗುವ ಪ್ರತಿ ಐದು ಕಾರುಗಳ ಪೈಕಿ ಒಂದರಲ್ಲಿ ಮಿತ್ತಲ್ ಕಂಪೆನಿಯ ಸ್ಟೀಲ್ ಬಳಕೆಯಾಗುತ್ತಿದೆ!

ಇಂಗ್ಲೆಂಡಿನಲ್ಲಿ ಏಳೆಂಟು ಬಂಗ್ಲೆಗಳನ್ನು ಹೊಂದಿರುವ ಮಿತ್ತಲ್, ಭಾರತದ ರಾಜಸ್ತಾನದ ಮಾರ್ವಾಡಿ ಕುಟುಂಬದ ಕುಡಿ. ತಂದೆಯ ಫ್ಯಾಕ್ಟರಿ ಬಿಟ್ಟು ವಿದೇಶಕ್ಕೆ ಹೋಗಿ ನೆಲೆಸಿದ ಬಳಿಕ ಅದೃಷ್ಟ ಕುದುರಿತು. ಲಂಡನ್ನಿನ ಈತನ ಒಂದು ಬಂಗಲೆಗೆ, ಷಹಜಹಾನ್ ತಾಜ್‌ಮಹಲ್ ಕಟ್ಟಿಸಲು ಅಗೆದ ಕ್ವಾರಿಯಿಂದಲೇ ಗ್ರಾನೈಟ್ ತರಿಸಿದ್ದರಂತೆ. ಆ ಮನೆಯಲ್ಲಿ 12 ಬೆಡ್‌ರೂಂಗಳಿವೆಯಂತೆ! ಲಕ್ಷ್ಮೀ ಕಟಾಕ್ಷ ಎಂದರೆ ಇನ್ನೇನು?

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65